ಶ್ರೀ ಎನ್ ಚೆಲುವರಾಯಸ್ವಾಮಿ (ಸಾರಿಗೆ ಸಚಿವರು) –

ಅ) 42 ಬಸ್ಸುಗಳು

ಆ) ಮತ್ತು ಇ) ಬಸ್ಸುಗಳನ್ನು ಜಾಸ್ತಿಮಾಡಿರುವುದರಿಂದ ಇದು ಉದ್ಭವಿಸುವುದಿಲ್ಲ

838 (155) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) ಮಾನ್ಯ ಲೋಕೋಪಯೋಗಿ ಹಾಗೂ ಇಂದನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಸಿಂಧನೂರು ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಿದ್ಯುತ್ ವಿತರಣೆ ಕೇಂದ್ರಗಳಿಗೆ ವಿದ್ಯುತ್ ಸರಬರಾಜಿನಲ್ಲಿ ತೊಂದರೆಯುಂಟಾದಾಗ ಇತರೇ ಲೈನ್‌ನಿಂದ ವಿದ್ಯುತ್ ಪಡೆಯುವ ವ್ಯವಸ್ಥೆಯನ್ನು ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) –

ಅ) ಇದೆ ಪರಿಶೀಲಿಸಲಾಗುವುದು

839 (157) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕೆ ಐ ಎಸ್ ಹೆಚ್ ಪಿ (ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ) 2ನೇಯ ಹಂತದ ಯೋಜನೆಯಲ್ಲಿ ಎಷ್ಟು ಕಿ ಮೀ ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿ ಪಡಿಸುವ ಉದ್ದೇಶ ರಾಜ್ಯ ಸರ್ಕಾರಕ್ಕೆ ಇದೆ,

ಆ) ಇದಕ್ಕಾಗಿ ಸಾಲ ಪಡೆದಿರುವ ಒಟ್ಟು ಮೊತ್ತವೆಷ್ಟು ,

ಇ) ಡಾ ನಂಜುಂಡಪ್ಪನವರ ವರದಿಯ ಆಧಾರದ ಮೇಲೆ ಅತ್ಯಂತ ಹಿಂದುಳಿದ ತಾಲ್ಲೂಕುಗಳಿಗೆ ಈ ಯೋಜನೆಯಲ್ಲಿ 'ಮೊದಲನೇಯ ಆದ್ಯತೆಯನ್ನು ಕೊಡಲಾಗಿದೆಯೇ ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು) –

ಅ) ಸುಮಾರು 3,411 ಕಿ ಮೀ ಉದ್ದದ ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸುವ ಉದ್ದೇಶ ರಾಜ್ಯ ಸರ್ಕಾರಕ್ಕೆ ಇದ್ದು, ಈ ಬಗ್ಗೆ ಸರ್ಕಾರದ ಆದೇಶಗಳನ್ನು ಹೊರಡಿಸಿ, 3 411 ಕಿ ಮೀ ಗಳ ರಾಜ್ಯ ಹೆದ್ದಾರಿಗಳನ್ನು

ಅಭಿವೃದ್ಧಿಪಡಿಸಲು ವಿವರವಾದ ಯೋಜನಾ ವರದಿಯನ್ನು (Detailed Project Report) ತಯಾರಿಸಲಾಗುತ್ತಿದೆ

ಆ) ಇದುವರೆವಿಗೂ ಯಾವ ಹಣಕಾಸು ಸಂಸ್ಥೆಯಿಂದಲೂ ಈ ಯೋಜನೆಗೆ ಸಾಲ ಪಡೆದಿರುವುದಿಲ್ಲ, ಈ ಉದ್ದೇಶಿತ ಯೋಜನೆಯನ್ನು ರಾಷ್ಟ್ರೀಯ ಅಥವಾ ಅಂತರ ರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ನೆರವು ಪಡೆಯಲು ಹಾಗೂ 2008–09 ರಲ್ಲಿ ಯೋಜನೆಯನ್ನು ಪ್ರಾರಂಭಿಸಲು ಉದ್ದೇಶವನ್ನಿಟ್ಟುಕೊಂಡು ಮುಂದುವರೆಯಲಾಗಿದೆ

ಈ ವಿವರವಾದ ಯೋಜನಾ ವರದಿಯನ್ನು ತಯಾರಿಸಲು ಅಂತರರಾಷ್ಟ್ರೀಯ ಮಟ್ಟದ ಸಲಹೆಗಾರರನ್ನು ನೇಮಿಸಲಾಗಿದೆ ಈ ಹಂತದಲ್ಲಿ ಆಯ್ಕೆಯಾದ ರಸ್ತೆಗಳ ವಿವರವಾದ ತಾಂತ್ರಿಕ ವಿನ್ಯಾಸ, ಅಂದಾಜು, ನಕ್ಷೆ ಮತ್ತು ಪರಿಮಾಣ ಪಟ್ಟಿಗಳನ್ನು ತಯಾರಿಸಲಾಗುವುದು

ಇ) ಉದ್ದೇಶಿತ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ – IIರಲ್ಲಿ ಸೇರ್ಪಡೆ ಆಗುವ ರಸ್ತೆ ಮಾರ್ಗಗಳ ಆಯ್ಕೆಯಲ್ಲಿ ವಿವಿಧ ಅರ್ಹತ ಮಾನದಂಡಗಳ ವಿಶ್ಲೇಷಣೆಯನ್ನು ಅಳವಡಿಸಿಕೊಳ್ಳಲಾಗಿದ್ದು ಶೇಕಡ 80 ಮೌಲ್ಯವನ್ನು ಎಕನಾಮಿಕ್ ಇನ್‌ಟರ್‌ನಲ್ ರೇಟ್ ಆಪ್ ರಿಟರ್ನ್ (EIRR) ಗೂ ಮತ್ತು ಶೇಕಡ 20 ಮೌಲ್ಯವನ್ನು ಪ್ರಾದೇಶಿಕ ಅಸಮಾನತೆಗಳ ನಿವಾರಣೆಗಾಗಿ ಡಾ ನಂಜುಂಡಪ್ಪ ನೇತೃತ್ವದಲ್ಲಿ ರಚಿತಗೊಂಡಿರುವ ಮೇಲ್ಕಟ್ಟದ ಸಮಿತಿಯ ವರದಿಯಲ್ಲಿನ ಡಿಪ್ರೆವೇಶನ್ ಸೂಚ್ಯಂಕಕ್ಕೂ (Deprivation Index) ನೀಡಲಾಗಿದೆ

480 (158) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೇಂದ್ರ ಸರ್ಕಾರದ ಸಿ ಆರ್ ಎಫ್ ಫಂಡ್ ಯೋಜನೆಯಲ್ಲಿ 2005–06ನೇ ಹಾಗೂ 2006–07ನೇ ಸಾಲುಗಳಲ್ಲಿ ಎಷ್ಟು ಕಿ ಮೀ ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿ ಪಡಿಸಲು ಅನುದಾನ ಮಂಜೂರು ಮಾಡಲಾಗಿದೆ,

ಆ) ಯಾವ ಯಾವ ಜಿಲ್ಲೆಗಳಲ್ಲಿ ಹಾಗೂ ತಾಲೂಕುಗಳಲ್ಲಿ ಈ ಯೋಜನೆಯ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ (ತಾಲೂಕು ಹಾಗೂ ಜಿಲ್ಲಾವಾರು ವಿವರ ನೀಡುವುದು)